ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ

**ಸಿ.ಸಿ.ನಂ.695/2015**

ಅಸಾಃ 1 (ಚಾಸಾ-1)

| | |
|---|---|
| ಹೆಸರು | ಪರಶುರಾಮ ಹಾದಿಮನಿ |
| ತಂದೆಯ /ಗಂಡನ ಹೆಸರು | ಬಸವಂತ |
| ವಯಸ್ಸು | 35 ವರ್ಷ |
| ಉದ್ಯೋಗ | ಸೆಂಟರಿಂಗ್ ಕೆಲಸ |
| ವಾಸಸ್ಥಳ | ತೇರದಾಳ |

ದಿನಾಂಕ 20-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ

ಚಾಸಾ-4 ನನ್ನ ತಾಯಿ. ಚಾಸಾ-6 ನನ್ನ ಅಕ್ಕ. ಚಾಸಾ-7 ನಮ್ಮ ಪಕ್ಕದ ಮನೆಯವರು. ಚಾಸಾ-5 ನನ್ನ ತಂದೆ. ಚಾಸಾ-2, 3 ಮತ್ತು 8 ರವರ ಪರಿಚಯವಿದೆ. ಆರೋಪಿತಳು ನಮ್ಮ ಮನೆಯ ಪಕ್ಕದವರಾಗಿದ್ದರಿಂದ ನನಗೆ ಪರಿಚಯವಿದೆ.

ದಿನಾಂಕ 24-02-2015 ರಂದು ಸಾ.4-30 ಗಂಟೆಗೆ ನನ್ನ ತಾಯಿ ನಮ್ಮ ಮನೆಯ ಕಟ್ಟೆ ಮೇಲೆ ಕುಳಿತಾಗ, ನನ್ನ ಅಣ್ಣನ ಮಕ್ಕಳು ಹೊರಗಡೆ ಆಟವಾಡುತ್ತಾ ಆರೋಪಿತಳ ಮನೆಯ ಕಟ್ಟೆ ಮುಂದುಗಡೆ ಹೋದಾಗ, ಆರೋಪಿತಳು ನನ್ನ ಅಣ್ಣನ ಮಕ್ಕಳಿಗೆ ರಂಡೆ ಮಕ್ಕಳು ಮತ್ತು ಸೂಳೇ ಮಕ್ಕಳು ಅಂತಾ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದಳು. ಆಗ ನನ್ನ ತಾಯಿ ಸಣ್ಣ ಮಕ್ಕಳಿಗೆ ಬೈಯಬೇಡ ಎಂದು ಹೇಳಿದಾಗ ಆರೋಪಿತಳು ಕುಡುಗೋಲು ಮತ್ತು ಕಟ್ಟಿಗೆಯಿಂದ ನನ್ನ ತಾಯಿಯ ಎದೆ ಮೇಲೆ ಮತ್ತು ಎಡಗೈ ಮೊಣಕೈ ಮೇಲೆ ಹೊಡೆದಿದ್ದಳು. ಆ ಸಮಯದಲ್ಲಿ ನನ್ನ ಅಕ್ಕ ಚಾಸಾ-6 ಒಬ್ಬಳೇ ಮನೆಯಲ್ಲಿದ್ದಳು. ಆಗ ನಮ್ಮ ಪಕ್ಕದ ಮನೆಯವರಾದ ಚಾಸಾ-3, 7 ಮತ್ತು 8 ರವರು ನನ್ನ ತಾಯಿಯನ್ನು ತೇರದಾಳದ ದಾನಿಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಸದರಿ ವಿಷಯವನ್ನು ನನಗೆ ಫೋನ್ ಮೂಲಕ ತಿಳಿಸಿದ ನಂತರ ನಾನು ಆಸ್ಪತ್ರೆಗೆ ಹೋದಾಗ ನನ್ನ ತಾಯಿ ಘಟನೆ ಬಗ್ಗೆ ನನಗೆ ಹೇಳಿದಳು. ನಂತರ ಅದೇ ದಿನ ನಾನು ಆ ಬಗ್ಗೆ ಪೋಲಿಸರಿಗೆ ದೂರು ನೀಡಿದ್ದೇನೆ.

ಮಾರನೇ ದಿನ ಪೋಲಿಸರು ನಮ್ಮ ಮನೆಯ ಹತ್ತಿರ ಬಂದು ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿ ಫೋಟೋ ತೆಗೆದಿದ್ದರು. ಅದೇ ಸಮಯಕ್ಕೆ ಪೋಲಿಸರು ಕುಡುಗೋಲು ಮತ್ತು ಬಡಿಗೆಯನ್ನು ಜಪ್ತಿಪಡಿಸಿಕೊಂಡಿದ್ದರು. ಘಟನೆಯಾದಗ ಆರೋಪಿತಳು ನನ್ನ

ತಾಯಿಗೆ ಜೀವಂತ ಬಿಡುವುದಿಲ್ಲ ಎಂದು ಹೇಳಿದ್ದಳು. ಸಾಕ್ಷಿ ನ್ಯಾಯಾಲಯದ ಮುಂದಿರುವ ಬಡಿಗೆಯನ್ನು ನೋಡಿ ಆ ದಿನ ಪೋಲಿಸರು ಜಪ್ತಿಪಡಿಸಿಕೊಂಡಿರುವ ಬಡಿಗೆಯಾಗಿದೆ ಎಂದು ಗುರುತಿಸಿದ್ದರಿಂದ ಅದನ್ನು ಎಂ.ಓ-1 ಅಂತಾ ಗುರುತಿಸಲಾಯಿತು. ನಾನು ನೀಡಿರುವ ದುೂರನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1 ಎ ಅಂತಾ ಗುರುತಿಸಲಾಯಿತು. ಪಂಚನಾಮೆ ಸಮಯಕ್ಕೆ ತೆಗೆದಿರುವ ಫೋಟೋವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿ ಪರ ಶ್ರೀ.ವ್ಹಿ ಡಿ ಪಿ ವಕೀಲರಿಂದ:-</u>

ಪೋಲಿಸರಿಗೆ ದೂರನ್ನು ನಾನೇ ಬರೆದುಕೊಟ್ಟಿರುತ್ತೇನೆ. ನಾನು ದೂರನ್ನು ಕೊಡಲು ದಿನಾಂಕ 24-02-2015 ರಂದು ಸಾ.5-30 ಗಂಟೆಗೆ ಹೋಗಿದ್ದೆ. ಆಗ ನನ್ನ ಜೊತೆ ನನ್ನ ಸಹೋದರಿ ಚಾಸಾ-6 ರವರು ಸಹ ಬಂದಿದ್ದರು. ನಮ್ಮ ಮನೆಯ ಉತ್ತರ ದಿಕ್ಕಿಗೆ ಆರೋಪಿತಳ ಮನೆ ಇದೆ. ಅವಳ ಮನೆಯಲ್ಲಿ ಅವಳು ಒಬ್ಬಳೇ ಇರುತ್ತಾಳೆ. ಅವಳ ಮಗಳು ಬೆಂಗಳೂರಿನಲ್ಲಿ ಇರುತ್ತಾಳೆ. ಆವಾಗವಾಗ ಬಂದು ಹೋಗುತ್ತಾಳೆ. ನಮ್ಮ ಮತ್ತು ಆರೋಪಿತಳ ಮನೆಯ ನಡುವೆ ಸಮಾಯಕ ಗೋಡೆ ಇದೆ ಎಂದರೆ ಸರಿ. ಆರೋಪಿತಳಿಗೆ ಅಂದಾಜು 48 ರಿಂದ 49 ವರ್ಷ ವಯಸ್ಸಾಗಿದೆ. ಆರೋಪಿತಳು ಯಲ್ಲಮ್ಮನ ಭಕ್ತಳಾಗಿದ್ದರಿಂದ ಅವಾಚ್ಯ ಶಬ್ದಗಳನ್ನು ಉಪಯೋಗಿಸುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ಸಹೋದರನ ಮಕ್ಕಳು, ನನ್ನ ಅಣ್ಣನ ಹೆಂಡತಿ ಮತ್ತು ನನ್ನ ತಂದೆ ತಾಯಿ ವಾಸವಾಗಿದ್ದೇವೆ. ಆರೋಪಿತಳ ಮನೆಯನ್ನು ಹೇಗಾದರೂ ಮಾಡಿ ನಾವು ಪಡೆಯಬೇಕೆಂದು ನಾವು ವಿನಾಕಾರಣ ಬಹಳ ದಿನಗಳಿಂದ ಅವಳೊಂದಿಗೆ ಜಗಳ ಮಾಡುತ್ತಿದ್ದೇವೆಂದರೆ ಸರಿಯಲ್ಲ. ಅವಳ ಮನೆಯ ಕರೆಂಟ್ ಕಟ್ ಮಾಡುವುದು, ಪುರಸಭೆಯ ಪೈಪಲೈನ್ ಕಟ್ ಮಾಡುವುದು ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಆ ಕಾರಣದಿಂದ ನಾವು ಮೊದಲಿನಿಂದಲೂ ಅವಳ ಮೇಲೆ ದ್ವೇಷ ಹೊಂದಿದ್ದೇವೆಂದರೆ ಸರಿಯಲ್ಲ. ಆರೋಪಿತಳು ನಮ್ಮ ವಿರುದ್ಧ ಓ ಎಸ್ ನಂ.93/2016 ರಲ್ಲಿ ಅವಳ ಆಸ್ತಿಯ ಕಬ್ಜೆಗೆ ತಕರಾರು ಮಾಡಬಾರದೆಂದು ದಾವೆ ಸಲ್ಲಿಸಿದ್ದಾಳೆಂದರೆ ಸರಿ. ಆ ಕಾರಣದಿಂದ ಆರೋಪಿತಳು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾವು ಅವಳ ಮೇಲೆ ಹಲ್ಲೆ ಮಾಡಿದ್ದೇವೆಂದರೆ ಸರಿಯಲ್ಲ. ಅವಳ ಕಪಾಳಕ್ಕೆ ನಾವು ಹೊಡೆದಿದ್ದರಿಂದ ಅವಳಿಗೆ ಕಿವಿ ಕೇಳಿಸುವುದಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿನ ಘಟನೆಯಾಗುವ ಒಂದು ವರ್ಷದ ಮುಂಚೆ ನನ್ನ ತಾಯಿಗೆ ಹಾರ್ಟ ಆಪರೇಶನ್ ಆಗಿತ್ತು. ನನಗೆ 5 ಗಂಟೆಗೆ ಫೋನ್ ಮಾಡಿ ಘಟನೆ ಬಗ್ಗೆ ತಿಳಿಸಿದ್ದರು. ಆಗ ನಾನು ತೇರದಾಳದ ಕಲೂತಿ ನಗರದಲ್ಲಿ ಇದ್ದೆ. ನಾನು 2-3 ನಿಮಿಷದಲ್ಲಿ ಆಸ್ಪತ್ರೆಗೆ ಹೋಗಿದ್ದೆ. ಘಟನೆ ಬಗ್ಗೆ ನನಗೆ ನನ್ನ ತಾಯಿ ಮಾಹಿತಿ ನೀಡಿದ್ದರು. ಆರೋಪಿತಳು ಕುಡುಗೋಲಿನಿಂದ ನನ್ನ ತಾಯಿಯ ಎಡ ಕೈಯ ಮೇಲೆ ಹಾಗೂ ಎದೆಯ ಮೇಲೆ ಹಾಗೂ ಬಡಿಗೆಯಿಂದ ಬೆನ್ನಿನ ಮೇಲೆ, ಮೊಣಕಾಲಿನ ಮೇಲೆ ಹೊಡೆದಿದ್ದಳು. ಮೊದಲು ಬಡಿಗೆಯಿಂದ ನಂತರ ಕುಡುಗೋಲಿನಿಂದ ಹೊಡೆದಿದ್ದಳು. ನನ್ನ ತಾಯಿಯ ಎದೆಗೆ ಬ್ಯಾಂಡೇಜ್ ಮಾಡಿದ್ದರು. ಆರೋಪಿತಳು ಬಡಿಗೆಯಿಂದಾಗಲೀ ಅಥವಾ ಕುಡುಗೋಲಿನಿಂದಾಗಲೀ ನನ್ನ ತಾಯಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾವೇ ಆರೋಪಿತಳಿಗೆ ಹೊಡೆದಿರುತ್ತೇವೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ಬನಹಟ್ಟಿ.

ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ

ಸಿ.ಸಿ.ನಂ.695/2015

ಅಸಾಃ 2 (ಚಾಸಾ-2)

| | |
|---|---|
| ಹೆಸರು | ಆನಂದ ನಡುವಿನಕೇರಿ |
| ತಾಯಿಯ ಹೆಸರು | ಪಾರವ್ವ |
| ವಯಸ್ಸು | 54 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ತೇರದಾಳ |

ದಿನಾಂಕ 20-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ

ನನಗೆ ಚಾಸಾ-1 ಮತ್ತು 3 ರವರ ಪರಿಚಯವಿದೆ. ಸಾಕ್ಷಿಗೆ ಒಂದು ದಾಖಲೆಯಾದ ಘಟನಾ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಅದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-3 ಎಂದು ಸಾಕ್ಷಿ ಸಹಿಯನ್ನು ನಿಪಿ-3 ಎ ಅಂತಾ ಗುರುತಿಸಲಾಯಿತು. ಕಳೆದ 5 ವರ್ಷಗಳ ಹಿಂದೆ ತೇರದಾಳದ ಮಹಾವೀರ ಸರ್ಕಲ್ ಹತ್ತಿರ ಆರೋಪಿತಳಿಗೆ ಮತ್ತು ಚಾಸಾ-4 ರವರ ನಡುವೆ ಜಗಳವಾಗಿತ್ತು. ಆಗ ನನ್ನನ್ನು ಪಂಚ ಎಂದು ಪೋಲಿಸರು ಕರೆಸಿದ್ದರು. ಆಗ ಪೋಲಿಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮ.2 ರಿಂದ 3 ರ ಸಮಯದಲ್ಲಿ ಪಂಚನಾಮೆ ಮಾಡಿ ಒಂದು ಕುಡುಗೋಲು ಮತ್ತು ಒಂದು ಬಡಿಗೆಯನ್ನು ಜಪ್ತಿಪಡಿಸಿಕೊಂಡಿದ್ದರು. ಪೋಲಿಸರು ಆ ಸಮಯದಲ್ಲಿ ಫೋಟೋ ತೆಗೆದಿದ್ದರು. ಸದರಿ ಫೋಟೋ ನಿಪಿ-2 ರಲ್ಲಿರುವ ಫೋಟೋ ಆಗಿದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಬಡಿಗೆಯನ್ನು ನೋಡಿ ಅದನ್ನು ಪೋಲಿಸರು ಪಂಚನಾಮೆ ಕಾಲಕ್ಕೆ ಜಪ್ತಿಪಡಿಸಿಕೊಂಡಿರುವ ಬಡಿಗೆಯಾಗಿದೆ ಎಂದು ಗುರುತಿಸಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ಶ್ರೀ.ವ್ಹಿ ಡಿ ಪಿ ವಕೀಲರಿಂದ:-

ಪಂಚನಾಮೆಯಲ್ಲಿ ಏನೇನು ಬರೆದಿದ್ದಾರೆಂದು ನನಗೆ ನೆನಪಿಲ್ಲ. ಎಲ್ಲಾ ಬರೆದ ನಂತರ ಪೋಲಿಸರು ನನ್ನ ಸಹಿ ಪಡೆದಿದ್ದರು. ಪೋಲಿಸರು ಒಂದು ಕುಡುಗೋಲು ಮತ್ತು ಒಂದು ಬಡಿಗೆಯನ್ನು ಜಪ್ತಿಪಡಿಸಿಕೊಂಡಿದ್ದರು. ಪಂಚನಾಮೆಗೆ ನಾನು ಎಷ್ಟು ಸಹಿ ಮಾಡಿದ್ದೆ ಎಂದು ನನಗೆ ಈಗ ನೆನಪಿಲ್ಲ. ನನಗೆ ಪಂಚನಾಮೆಗೆ ಕರೆಯುವಾಗ ನಾನು ಮುನ್ಸಿಪಾಲಿಟಿಯಲ್ಲಿ ಇದ್ದೆ. ಆಗ ಪೋಲಿಸರು ಅಲ್ಲಿಯೇ ಬಂದು ನನ್ನನ್ನು ಕರೆದುಕೊಂಡು ಹೋಗಿದ್ದರು. ಆಗ ಸಮಯ ಬೆ.11

ಗಂಟೆಯಾಗಿತ್ತು. 15-20 ನಿಮಿಷಗಳಲ್ಲಿ ನಾವು ಘಟನಾ ಸ್ಥಳಕ್ಕೆ ಹೋಗಿದ್ದೆವು. ನಾನು ಮತ್ತು ಚಾಸಾ-1 ರವರ ಕುಟುಂಬದವರು ಮೊದಲಿನಿಂದಲೂ ಪರಿಚಯ ಎಂದರೆ ಸಾಕ್ಷಿ ಎರಡು ಪಕ್ಷಗಾರರು ನನಗೆ ಮೊದಲಿನಿಂದಲೂ ಪರಿಚಯವಿದ್ದಾರೆಂದು ಉತ್ತರಿಸಿರುತ್ತಾರೆ. ಚಾಸಾ-1 ರವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ಬನಹಟ್ಟಿ.